## ನವಿಲುಗನ್ನಡಿ

- ಏಪ್ರಿಲ್ ತಿಂಗಳ ‘ಮಯೂರ’ ಮುಖಪುಟ ಗಮನ ಸೆಳೆಯಿತು. ರಂಗನಿರ್ದೇಶಕ ನಟರಾಜ್ ಹೊನ್ನವಳ್ಳಿ ಅವರ ಸಂದರ್ಶನ ಸಕಾಲಿಕ.

**ಕೆ.ಪಿ. ರಾಮುಗುಂಡಿ, ಬೈಲಹೊಂಗಲ**

- ವಿನಾಯಕ ಅರಳಸುರಳಿ ಅವರ ‘ಗುಮಾಸ್ತ’ ಕತೆ ತನ್ನ ಸರಳ ನಿರೂಪಣೆ ಹಾಗೂ ಬದುಕಿನ ಹಲವು ಆಯಾಮಗಳ ಚಿತ್ರಣದಿಂದಾಗಿ ಗಮನ ಸೆಳೆಯಿತು. ಗುಮಾಸ್ತ ರಾಜೀವನ ಭಾವುಕತೆಯನ್ನು ಕಾರ್ಪೊರೇಟ್ ವ್ಯಕ್ತಿಗಳು ಶೋಷಿಸುವ ರೀತಿ ಮನವನ್ನು ತಟ್ಟುತ್ತದೆ. ಎಂದಿನಂತೆ ‘ಮಯೂರ’ ತನ್ನ ‘ಬಹು ಮಗ್ಗುಲಿನ ಹರಹನ್ನು’ ಉಳಿಸಿಕೊಂಡಿದೆ.

**ವಾಸುದೇವ ನಾಡಿಗ್, ಬೆಂಗಳೂರು**

- ‘ಏಳುಕೊಂಡಲವಾಡ’ (ಸ್ಕಂದ ಆಗುಂಬೆ) ಕತೆ ಸಾಮಾನ್ಯನೊಬ್ಬನ ಬದುಕಿನ ಅನಿರೀಕ್ಷಿತ ಹಾಗೂ ಅಚ್ಚರಿಯ ಪಯಣವನ್ನು ಲವಲವಿಕೆಯಿಂದ ನಿರೂಪಿಸಿದೆ.

**ವೀಣಾ ರಾವ್, ಬೆಂಗಳೂರು**

- ಸಾಹಿತ್ಯ ಮತ್ತು ಸಂಗೀತ ಮನುಷ್ಯ ಸಂವೇದನೆಯನ್ನು ಎಂದಿನಿಂದಲೂ ಸೂಕ್ಷ್ಮಗೊಳಿಸುತ್ತ ಬಂದಿವೆ. ಇದನ್ನು ಎಸ್. ದಿವಾಕರ್ ಅವರ ಪ್ರಬಂಧ ‘ಸಂಗೀತ: ಸರ್ವಜನಾಂಗದ ಶಾಂತಿಯ ಭಾಷೆ’ ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದೆ.

**ಶೂದ್ರ ಶ್ರೀನಿವಾಸ್, ಬೆಂಗಳೂರು**

- ಸಿಡ್ನಿ ಶ್ರೀನಿವಾಸ್ ಅವರ ಕತೆ ‘ಅಳಿಯಲಾರದ ನೆನಹು’ ಮನಸ್ಸನ್ನು ಕಲುಕಿತು. ಪ್ರತಿಯೊಬ್ಬರ ಬದುಕಿನಲ್ಲೂ ಮೊದಲ ಪ್ರೀತಿಯ ಅನುಭವ ಇದ್ದೇ ಇರುತ್ತದೆ. ಎಷ್ಟೇ ವಯಸ್ಸಾಗಿರಲಿ, ಜೀವನದಲ್ಲಿ ಮುಂದೆ ಸಾಗಿರಲಿ ಈ ಪ್ರೀತಿಯ ನೆನಪು ಶಾಶ್ವತ.




**ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ**

- ‘ಸಂಗೀತ: ಸರ್ವ ಜನಾಂಗದ ಶಾಂತಿಯ ತೋಟ’ ಪ್ರಬಂಧ ಸಂಚಿಕೆಗೆ ಕಿರೀಟದಂತಿದೆ. ಷ. ಶೆಟ್ಟರ್ ಕುರಿತ ಕಡಿದಾಳು ಶಾಮಣ್ಣ ಅವರ ನುಡಿ ನಮನ ಅತ್ಯಂತ ಆತ್ಮೀಯವಾಗಿದೆ.

**ಬಿ.ಆರ್. ಅಣ್ಣಾಸಾಗರ, ವಿದ್ಯಾನಗರ**

- ‘ಅತ್ತರು ಮಾರುವ ಹುಡುಗ’ (ಕೇಶವರೆಡ್ಡಿ ಹಂದ್ರಾಳ) ಕತೆ ಚೆನ್ನಾಗಿದೆ. ಆಂಧ್ರ ಪ್ರದೇಶದ ಪ್ರವಾಸಿ ತಾಣಗಳಲ್ಲಿ ಕಾಣುವ ಚಿಕ್ಕಪುಟ್ಟ ವ್ಯಾಪಾರಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಈ ಕತೆಯ ಪಾತ್ರಗಳನ್ನು ಹೆಣೆದಂತಿದೆ.

**ಗುರುದೇವ್ ಭಂಡಾರ್ಕರ್, ಹೊಸನಗರ**

- ಪ್ರೀತಿ ನಾಗರಾಜ ಅವರ ಪ್ರಬಂಧ ‘ಸಿಟ್ಟು ಸಿಟ್ಟಂದೇಕೆ ಬೀಳುಗಳೆವಿರಿ’ ಸಿಟ್ಟಿನ ಕುರಿತಾದ ನನ್ನ ಅನುಮಾನಗಳನ್ನು ಕಡಿಮೆ ಮಾಡಿತು. ಈಗ ಸಹಜವಾಗಿಯೇ ಸಿಟ್ಟು ಮಾಡಿಕೊಳ್ಳಬಹುದು!

**ಪೂರ್ಣಿಮಾ ನಾಯ್ಕ, ಭಟ್ಕಳ**